ಸಿದ್ಧಹಸ್ತರಾಗಿದ್ದವರ ಹತ್ತಿರ ಅಂಜನ ನೋಡಿಸಿದ್ದಾಯ್ತು. 'ಜೀವಂತವಾಗಿದಾರೆ. ಉತ್ತರದ ಕಡೆ ಹೋಗಿದಾರೆ' ಎನ್ನುವ ಅಭಯವಾಣಿ ಕೇಳಿ ಕಿಂಚಿತ್ ಸಮಾಧಾನ. ಪ್ರಭಾವತಿ ನಾನಾ ದೇವರಿಗೆ ಹರಕೆ ಕಟ್ಟಿಕೊಂಡಳು. 'ಒಮ್ಮೆ ಗಂಡ ಮನೆಗೆ ಬಂದರೆ ಸಾಕು, ಮತ್ತೆಂದೂ ಅವನನ್ನು ಕೆಣಕುವ ದುಸ್ಸಾಹಸಕ್ಕೆಳಿಯುವುದಿಲ್ಲ. ಅವನು ಹೇಗಿದ್ದಾನೋ ಹಾಗೇ ಇರಲಿ' ಎನ್ನುವ ಜ್ಞಾನೋದಯವಾಗುವಾಗ ಕಾಲ ಮಿಂಚಿ ಹೋಗಿತ್ತು ಎನ್ನುವುದು ಅವಳ ಅರಿವಿಗೆ ಬಂತು. ಸ್ವಭಾವಕ್ಕೆ ಮದ್ದಿಲ್ಲ ಎಂದು ಸುಮ್ಮನೆ ಹೇಳುತ್ತಾರೆಯೇ? ಅವನನ್ನು ತಿದ್ದಿ ಸರಿ ಮಾಡಿಕೊಂಡು ತನ್ನಿಚ್ಛೆಗೆ ತಕ್ಕಂತೆ ಬಾಗಿಸಿಕೊಳ್ಳುತ್ತೇನೆಂದುಕೊಂಡಿದ್ದು ಮಣ್ಣಿನ ಮುದ್ದೆಯಿಂದ ಗೌರಿ, ಗಣಪತಿ ವಿಗ್ರಹ ಮಾಡಿದಂತೆ ಎಂದು ಭಾವಿಸಿದ ತನ್ನ ಅಜ್ಞಾನಕ್ಕೆ ತಾನೇ ಮರುಗಿದಳು, ಕೊರಗಿದಳು ಪ್ರಭಾವತಿ. ಮುರಿಯುವಷ್ಟು ಕಡ್ಡಿ ಬಾಗಿಸಿದಂತಾಗಿತ್ತು. ಮಾವನಿಂದ ಮದರಂಗಿ ಹಚ್ಚಿಸಿಕೊಂಡ ಪ್ರಕರಣ ಯಾವತ್ತಿನಿಂದಲೋ ಅವನೊಳಗೆ ಹತ್ತಿಕೊಂಡಿದ್ದ ಕಿಡಿಯನ್ನು ಊದಿ ಪ್ರಜ್ವಲಿಸಿ ಎಲ್ಲವನ್ನೂ ತೊರೆದು ಹೋಗಲು ಒಂದು ನೆವ ಮಾತ್ರವಾಗಿ ಒದಗಿ ಬಂದಿರಬಹುದು ಎಂದೂ ಅಂತರಂಗಕ್ಕೆ ಅನಿಸುತ್ತಿತ್ತು.

★★★

'ಇವರಿಲ್ಲದಿದ್ದರೆ ಪಥ ನಡೆಯುವುದೇ ಇಲ್ಲ. ಬದುಕು ಮುಗಿದೇ ಬಿಡುತ್ತದೆ' ಎನ್ನುವ ನಮಗೆ ನಾವೇ ಸೃಜಿಸಿಕೊಂಡ ಭ್ರಮೆಗಳ ಪೊಳ್ಳುತನವನ್ನು ಅಣಕಿಸುತ್ತಾ ಸರಿದು ಹೋಯ್ತು ಕಾಲ. ನಿಧನಿಧಾನಕ್ಕೆ ಬಂಡಿ ಮುಂದುವರಿಯಿತು. ತನ್ನ ದಿಕ್ಕು ಹಿಡಿದು ಸಾಗಿತು. ಎಂಟರ ಪೋರ ರಾಮಕೃಷ್ಣ ಹದಿನೆಂಟರ ಹೊಸಿಲಿಗೆ ಬಂದು ನಿಂತು, ಎಸ್ಸೆಸ್ಸೆಲ್ಸಿ ಮುಗಿಸಿ, ಮನೆಯೊಡೆಯನ ಸ್ಥಾನ ವಹಿಸಿಕೊಂಡು ಆಡಳಿತಸೂತ್ರವನ್ನು ಕೈಗೆತ್ತಿಕೊಂಡ. ಇಷ್ಟರಲ್ಲಾಗಲೇ ತನ್ನ ಪಾಪಪ್ರಜ್ಞೆಯಿಂದ ಸುಧಾರಿಸಿಕೊಂಡು, ಘಟನೆಗೆ ತನ್ನದೇ ಕಾರಣ ಕೊಟ್ಟುಕೊಂಡು, ಇದರಲ್ಲಿ ವೃಥಾ ತಾನು ಪಶ್ಚಾತ್ತಾಪಪಡುವಂತಹದ್ದೇನಿಲ್ಲ ಎನ್ನುವ ಹಂತ ತಲುಪಿದ್ದಳು ಪ್ರಭಾವತಿ. ಎಲ್ಲಾ ಕೃತ್ಯಗಳಿಗೂ ಸ್ವಸಮರ್ಥನೆಯ ವಾದ ಇದ್ದೇ ಇರುವಂತೆ ಪ್ರಭಾವತಿಗೂ ಅಂತಹ ವಾದ ಆಪ್ಯಾಯಮಾನವಾಗಿತ್ತು. ತಾನು ಯಾವ ತಪ್ಪೂ ಮಾಡಿಲ್ಲವೆಂದ ಮೇಲೆ ತನಗೇಕೆ ಆತ್ಮಸಾಕ್ಷಿ ಚುಚ್ಚಬೇಕು? ಈ ಪ್ರಸಂಗದ ಹೊಣೆಗಾರಿಕೆಯನ್ನು ತನ್ನ ಮೇಲೆಳೆದುಕೊಂಡಿದ್ದು ತನ್ನ ತಪ್ಪು. ಒಂದೂ ಮಾತಾಡದೆ ಬಾಯಿಗೆ ಕಡುಬು ತುಂಬಿಕೊಂಡವನಂತೆ ಬಿಮ್ಮಗಿದ್ದವನು ಇದ್ದಕ್ಕಿದ್ದಂತೆ 'ಅಲಕ್ ನಿರಂಜನ್' ಎಂದು ಎಲ್ಲಾ ತ್ಯಜಿಸಿ ಹೊರಟು ಹೋದರೆ ಅದು ಅವನ ಹಣೇಬರಹ. ಸಂಸಾರಕ್ಕೆ ಅಂಟಿಕೊಳ್ಳಲಾಗದವನ ದೌರ್ಬಲ್ಯ. ಇಂತಹವನು ಮದುವೆ ಯಾಕಾದ? ಸಂಸಾರದ ಕುರಿತು ಅನಾಸಕ್ತನಂತಿದ್ದವನಿಗೆ ಇದಲ್ಲದಿದ್ದರೆ ಸಿಗುತ್ತಿತ್ತೇನೋ ಇನ್ನೊಂದು ನೆಪ. ಜವಾಬ್ದಾರಿಗಳಿಂದ ನುಣುಚಿಕೊಂಡು ಓಡಿ ಹೋಗಲು ಒಂದು ನೆಪ. ಹೆಗಲು ಮುರಿಯುವ ಯಾವ ಜವಾಬ್ದಾರಿಗಳಿದ್ದವು ಶ್ರೀಪಾದನಿಗೆ? ಅವನದು ಅದೊಂದು ರೀತಿಯ ನಿರಾಕರಣೆಯ ಮನೋಸ್ಥಿತಿ. ತನ್ನ ಸಂಸಾರದ ಕುರಿತು ಅವನಿಗೆ ವ್ಯಾಮೋಹವಿತ್ತೆಂದು ಕಲ್ಪಿಸಿಕೊಳ್ಳುವುದೇ ಕಷ್ಟ. ತನ್ನ ಒಳಗನ್ನು ಎಂದೂ ತೆರೆದಿಡದ ನಿರ್ಲಿಪ್ತ ಮನುಷ್ಯ. ಇರಬಹುದು ಇಂತಹವರೂ. ಕುತೂಹಲಕ್ಕೆ ಮದುವೆಯಾಗಿ ಭ್ರಮನಿರಸನಗೊಂಡೆನೆಂದುಕೊಳ್ಳುವಂತಹವರು. ಕ್ರಮೇಣ ಪ್ರಭಾವತಿಯ ಮನಃಸ್ಥಿತಿ ಯಾವ ಹಂತ ತಲುಪಿತೆಂದರೆ ಆವತ್ತು ಶ್ರೀಪಾದ ನೋಡಿದ ದೃಶ್ಯಕ್ಕೂ, ಅವನು ಮನೆ ಬಿಟ್ಟು ಕಣ್ಮರೆಯಾಗುವುದಕ್ಕೂ ತಾಳೆ ಹಾಕುವುದೇ ತಪ್ಪು ಎನ್ನುವ ನಿಲುವಿಗೆ ಅವಳು ತಲುಪಿದ್ದಳು. ಆದರೆ, ಆ ಮನೋಭಾವನೆಯನ್ನು ದೃಢವಾಗಿ ನಂಬಿಕೊಳ್ಳಲೂ ಅವಳಿಗೆ ಅಸಾಧ್ಯವೆನಿಸುತ್ತಿತ್ತು. ಅದೊಂದು ರೀತಿಯ ತ್ರಿಶಂಕು ಪರಿಸ್ಥಿತಿ. ಎಲ್ಲಿ ಅಂಡಲೆಯುತ್ತಿದ್ದಾನೋ, ಜೀವ ಕಳೆದುಕೊಂಡಿದ್ದಾನೋ ಅದೂ ಗೊತ್ತಿಲ್ಲ. ಅಂತಹವನಿಗೋಸ್ಕರ ತಾನು ನೋಯುವುದು, ಬೇಯುವುದು ತನಗೆ ತಾನೇ ಕೊಟ್ಟುಕೊಳ್ಳುವ ಶಿಕ್ಷೆ. ಅವನನ್ನು ತನ್ನ ದಾರಿಗೆ ತಂದುಕೊಳ್ಳಲು ತಾನು ನಡೆದುಕೊಂಡ ರೀತಿ